## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/16/ಅ.ಉ.ಗೌ.ಧ/ಆಯವ್ಯಯ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20.11.2018

ಇವರಿಗೆ:
ಜಂಟಿ ನಿರ್ದೇಶಕರು
ಪ್ರಾದೇಶಿಕ ಕಛೇರಿ
ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು
ಧಾರವಾಡ ಮತ್ತು ಕಲಬುರಗಿ.

ಮಾನ್ಯರೆ,

ವಿಷಯ 2018-19ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ಪಾವತಿಗೆ ಬಿಡುಗಡೆ ಮಾಡಲಾದ ಅನುದಾನ ವೆಚ್ಚ ಮಾಡಿಲ್ಲದಿರುವ ಕುರಿತು.

ಉಲ್ಲೇಖ
1 ಸರ್ಕಾರದ ಆದೇಶ ಸಂಖ್ಯೆ:ಇಡಿ:60:ಹೆಚ್‌ಪಿಸಿ:2018(ಪಿ) ದಿನಾಂಕ:06.04.2018, 27.07.2018 & 10.10.2018
2 ಈ ಕಛೇರಿಯ ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಕಾಶಿಇ: 16 : ಅ.ಉ.ಗೌ.ಧ:ಆಯವ್ಯಯ:2018-19 ದಿನಾಂಕ:03.05.2018, 30.05.2018, 24.09.2018 ಮತ್ತು 15.10.2018
3 ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:4:ಟಿಎಫ್‌ಪಿ:2018 ದಿನಾಂಕ:24.7.2018 & 29.09.2018
4 ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:14.11.2018

****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿ ಸಂಬಂಧ ಉಲ್ಲೇಖ(4)ರ ಈ ಕಛೇರಿಯ ಪತ್ರದೆಡೆಗೆ ತಮ್ಮ ಗಮನವನ್ನು ಸೆಳೆಯಲಾಗಿದೆ. 2018-19ನೇ ಸಾಲಿಗೆ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ವೆಚ್ಚವಾಗಿರುವ ವಿವರಗಳನ್ನು ಮತ್ತೊಮ್ಮೆ ಈ ಕೆಳಕಂಡಂತೆ ವಿವರಿಸಲಾಗಿದೆ

(ರೂ. ಕೋಟಿಗಳಲ್ಲಿ)

| ಸರ್ಕಾರ ದಿಂದ ಬಿಡುಗಡೆ ಮಾಡಿರುವ ಮೊತ್ತ | ಜಂಟಿ ನಿರ್ದೇಶಕರು ಗಳಿಗೆ ಬಿಡುಗಡೆ ಮಾಡಿರುವ ಮೊತ್ತ | ಶೇಕಡ ವಾರು | ಜಂಟಿ ನಿರ್ದೇಶಕರು ಗಳಿಂದ ಬಿಡುಗಡೆ ಮಾಡಿರುವ ಮೊತ್ತ | ಶೇಕಡ ವಾರು | ಕಾಲೇಜು ಹಂತದಲ್ಲಿ ವೆಚ್ಚ ವಾಗಿರುವ ಮೊತ್ತ | ಶೇಕಡ ವಾರು | ನಿಯಮಾನು ಸಾರ ವೆಚ್ಚ ವಾಗಬೇಕಾಗಿ ರುವ ಮೊತ್ತ | ಶೇಕಡ ವಾರು |
|---|---|---|---|---|---|---|---|---|
| 40.76 | 34.15 | 83.78% | 29.53 | 72.45% | 24.11 | 59.15% | 30.57 | 75% |

ಪ್ರಾದೇಶಿಕ ಕಛೇರಿ ಮತ್ತು ಕಾಲೇಜುಗಳ ಹಂತದಲ್ಲಿ ಅನುದಾನ ವೆಚ್ಚವಾಗದ ಹಿನ್ನಲೆಯಲ್ಲಿ ಅನುದಾನವನ್ನು ವೆಚ್ಚ ಮಾಡಲು 03 ದಿನಗಳ ಒಳಗಾಗಿ ಅಗತ್ಯ ಕ್ರಮವಹಿಸಲು ಹಾಗೂ ಅನುದಾನ ವೆಚ್ಚ ಮಾಡದಿರಲು ಕಾರಣಕರ್ತರಾದ ಅಧಿಕಾರಿ/ಸಿಬ್ಬಂದಿಗಳಿಗೆ ನೋಟಿಸ್ ಜಾರಿ ಮಾಡಿ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ದಿನಾಂಕ:20.11.2018ರಂದು ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ವರದಿಯನ್ನು ಸಲ್ಲಿಸದೇ ಕೇವಲ ಕೆ-2 ರಲ್ಲಿದ್ದಂತೆ ಬಿಡುಗಡೆ ಮಾಡಿರುವ, ವೆಚ್ಚ ಮಾಡಿರುವ ಮತ್ತು ಉಳಿಕೆ ಇರುವ ಅನುದಾನದ ಪಟ್ಟಿಯನ್ನು ಮಾತ್ರ ಸಲ್ಲಿಸಲಾಗಿರುತ್ತದೆ. ಸದರಿ ಪಟ್ಟಿಯನ್ನು ಪರಿಶೀಲಿಸಲಾಗಿ ಯಾವುದೇ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಿರುವುದಿಲ್ಲ ಹಾಗೂ ಕಾಲೇಜುಗಳ ಹಂತದಲ್ಲಿ ರೂ.26.60 ಕೋಟಿ ಮಾತ್ರ ಅನುದಾನ ವೆಚ್ಚವಾಗಿದ್ದು, ಸರ್ಕಾರದಿಂದ 3ನೇ ಕಂತಿನ ಅನುದಾನ ಬಿಡುಗಡೆಯಾಗಲು ಮೇಲೆ ತಿಳಿಸಿರುವಂತೆ ರೂ. 30.57 ಕೋಟಿ ವೆಚ್ಚವಾಗಬೇಕಾಗಿರುತ್ತದೆ. ಸದರಿ ಅಂಕಿಅಂಶಗಳನ್ನು ಪರಿಗಣಿಸಲಾಗಿ ಜಂಟಿ ನಿರ್ದೇಶಕರ ಹಂತದಲ್ಲಾಗಲಿ ಅಥವಾ ಕಾಲೇಜುಗಳ ಹಂತದಲ್ಲಾಗಲಿ ಅನುದಾನ ವೆಚ್ಚಕ್ಕೆ ವೈಯಕ್ತಿಕ ಗಮನಹರಿಸದಿರುವುದು ಸಂಬಂಧಿಸಿದ ಜಂಟಿ ನಿರ್ದೇಶಕರುಗಳ ಮತ್ತು ಪ್ರಾಂಶುಪಾಲರುಗಳ ಕರ್ತವ್ಯ ನಿರ್ಲಕ್ಷತೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ:20.11.2018ರಂದು ಜಂಟಿ ನಿರ್ದೇಶಕರಿಂದ ಸ್ವೀಕರಿಸಲಾಗಿರುವ ಪಟ್ಟಿಯ ಪ್ರಕಾರ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿವಾರು ಬಿಡುಗಡೆ ಮಾಡಿರುವ ಅನುದಾನ, ವೆಚ್ಚ ಮತ್ತು ಉಳಿಕೆ ಇರುವ ಅನುದಾನದ ವಿವರಗಳು ಕೆಳಕಂಡಂತಿದೆ.

----2

| ಕ್ರ ಸಂ | ಪ್ರಾದೇಶಿಕ ಕಛೇರಿ | ಕೇಂದ್ರ ಕಛೇರಿಯಿಂದ ಪ್ರಾದೇಶಿಕ ಕಛೇರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತ | ಪ್ರಾದೇಶಿಕ ಕಛೇರಿಯಿಂದ ಕಾಲೇಜುಗಳಿಗೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತ | ಪ್ರಾದೇಶಿಕ ಕಛೇರಿ ಹಂತದಲ್ಲಿ ಉಳಿಕೆ ಇರುವ ಅನುದಾನದ ಮೊತ್ತ | ಕಾಲೇಜುಗಳ ಹಂತದಲ್ಲಿ ವೆಚ್ಚವಾಗಿರುವ ಅನುದಾನದ ಮೊತ್ತ | ಕಾಲೇಜುಗಳ ಹಂತದ್ದ ಉಳಿಕೆ ಇರುವ ಅನುದಾನದ ಮೊತ್ತ |
|---|---|---|---|---|---|---|
| 1 | ಬೆಂಗಳೂರು | 68359816 | 68359816 | 0 | 59211008 | 9148808 |
| 2 | ಮೈಸೂರು | 56623792 | 46701137 | 9922655 | 40865255 | 5835882 |
| 3 | ಶಿವಮೊಗ್ಗ | 52183639 | 46442359 | 5741280 | 41793265 | 4649094 |
| 4 | ಮಂಗಳೂರು | 31447243 | 27666797 | 3780446 | 26202728 | 1464069 |
| 5 | ಧಾರವಾಡ | 71322242 | 58741204 | 12581038 | 46166275 | 12574929 |
| 6 | ಕಲಬುರಗಿ | 61557250 | 60550255 | 1006995 | 51807208 | 8743047 |
| **ಒಟ್ಟು ಮೊತ್ತ** | | **341493982** | **308461568** | **33032414** | **266045739** | **42415829** |

ಮೇಲಿನ ಅಂಕಿಅಂಶಗಳ ಪ್ರಕಾರ ಜಂಟಿ ನಿರ್ದೇಶಕರ ಕಛೇರಿ ಹಂತದಲ್ಲಿ ಉಳಿಕೆ ಇರುವ ಅನುದಾನದ ಮೊತ್ತ ರೂ. 3,30,32,414 ಮತ್ತು ಕಾಲೇಜುಗಳ ಹಂತದಲ್ಲಿ ಉಳಿಕೆ ಇರುವ ಅನುದಾನದ ಮೊತ್ತ ರೂ. 4,24,15,829 ಗಳನ್ನು ದಿನಾಂಕ:23.11.2018ರೊಳಗೆ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಿ ದಿನಾಂಕ:24.11.2018ರೊಳಗಾಗಿ ಕೇಂದ್ರ ಕಛೇರಿಗೆ ವರದಿಯನ್ನು ಬಳಕೆ ಪ್ರಮಾಣ ಪತ್ರಗಳೊಂದಿಗೆ ಸಲ್ಲಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. 2018-19ನೇ ಸಾಲಿನಲ್ಲಿ ಇಲ್ಲಿಯವರೆಗೆ ಕೇಂದ್ರ ಕಛೇರಿಯಿಂದ ಮೇ-2018ರ ವರೆಗೆ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗಾಗಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ ಮೇಲೆ ತಿಳಿಸಿರುವಂತೆ ಪ್ರಾದೇಶಿಕ ಕಛೇರಿ/ಕಾಲೇಜುಗಳ ಹಂತದಲ್ಲಿ ಮೇ-2018ರ ವರೆಗೆ ಅರ್ಹ ಅತಿಥಿ ಉಪನ್ಯಾಸಕರುಳಿಗೆ ಗೌರವಧನ ಪಾವತಿಗೆ ಅನುದಾನ ಬಿಡುಗಡೆ ಮಾಡಿದ ನಂತರವೂ ಉಳಿಕೆ ಇದ್ದಲ್ಲಿ ಸದರಿ ಅನುದಾನವನ್ನು ಹಿಂದಿನ ಸಾಲುಗಳ ಬಾಕಿ ಪಾವತಿಗೆ ಅನುದಾನ ಬಿಡುಗಡೆ ಮಾಡಲು ಮತ್ತು ಉಳಿಕೆ ಇದ್ದಲ್ಲಿ 2018-19ನೇ ಸಾಲಿನ ಗೌರವಧನ ಪಾವತಿಗೆ ಅಗತ್ಯಕ್ರಮಕೈಗೊಂಡು ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸುತ್ತಾ, ಒಂದು ವೇಳೆ ಅನುದಾನ ವೆಚ್ಚವಾಗದೇ ಇದ್ದಲ್ಲಿ ಸರ್ಕಾರದಿಂದ 3ನೇ ಕಂತಿನ ಅನುದಾನ ಬಿಡುಗಡೆಯಾಗುವುದಿಲ್ಲ. ಇದರಿಂದಾಗಿ ಈಗಾಗಲೇ ಉಲ್ಲೇಖ(2)ರ ದಿನಾಂಕ:15.10.2018ರ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಪ್ರಾದೇಶಿಕ ಜಂಟಿ ನಿರ್ದೇಶಕರ ಕೆ-2 ಕೋಡ್‌ಗಳಿಗೆ ಅಪ್‌ಲೋಡ್ ಮಾಡಲು ಸಾಧ್ಯವಾಗುವುದಿಲ್ಲ. ಈ ಎಲ್ಲಾ ಬೆಳವಣಿಗಳಿಗೆ ಕಾರಣಕರ್ತರಾಗುವ ಜಂಟಿ ನಿರ್ದೇಶಕರು/ಪ್ರಾಂಶುಪಾಲರುಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಅಂತಿಮ ಎಚ್ಚರಿಕೆಯನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

To
website